★ ಆಮ್ಲಜನಕ ಮೂಲಕ ಮಧುಮೇಹಗಳಿಗೆ ನೀಡುವ ವಿಶಿಷ್ಟ ಚಿಕಿತ್ಸೆ

★ ಅಮೆರಿಕ ಮೂಲದ ವೈದ್ಯಕೀಯ ತಂತ್ರಜ್ಞಾನ

★ ಮಧುಮೇಹದಿಂದ ಬಳಲುವವರು ಅನುಭವಿಸುವ ದೀರ್ಘಕಾಲದ ಗಾಯ ಗುಣಪಡಿಸಲು ಉತ್ತಮ ಸಾಧನ




# ಡಾಲ್ವಕೋಟ್ ವೂಂಡ್ ಕೇರ್ (ಡಿಡಬ್ಲ್ಯುಸಿ)

ಒಂದು ವಿಶಿಷ್ಟ ಹಾಗೂ ಅಪರೂಪದ ಗಾಯ ಸುರಕ್ಷಾ ಕೇಂದ್ರವಾಗಿದ್ದು, ತನ್ನ ಮೊದಲ ಪರಿಪೂರ್ಣ ಚಿಕಿತ್ಸಾ ಕೇಂದ್ರವನ್ನು ಬೆಂಗಳೂರಿನ ವೈಟ್‌ಫೀಲ್ಡ್‌ನಲ್ಲಿರುವ ವೈದೇಹಿ ಆಸ್ಪತ್ರೆಯಲ್ಲಿ ತೆರೆಯಲಾಗಿದೆ. ಅಮೆರಿಕದ ಡಲ್ಲಾಸ್‌ನಲ್ಲಿ ತಜ್ಞ ವೈದ್ಯರಾಗಿರುವ ಡಾ.ಮಹೇಶ್ ಕೊಟಪಲ್ಲಿ ಅವರ ಕಲ್ಪನೆಯಿಂದ ಸಾಕಾರಗೊಂಡ ಈ ಗಾಯ ನಿವಾರಣಾ ಕೇಂದ್ರ ದೀರ್ಘಾವಧಿ ಗಾಯದ ಸಮಸ್ಯೆಯಿಂದ ಬಳಲುತ್ತಿರುವವರಿಗೆ ಪರಿಣಾಮಕಾರಿ ಚಿಕಿತ್ಸೆ ನೀಡುವ ಗುರಿ ಇಟ್ಟುಕೊಂಡಿದೆ.


ಇಲ್ಲ. ಇದಕ್ಕಾಗಿ ವಿಶೇಷ ಚಿಕಿತ್ಸೆಯ ಅಗತ್ಯವಿದೆ. ಇಂಥ ಗಾಯಗಳು ಮಾಯಲು ಕನಿಷ್ಠ ಒಂದು ತಿಂಗಳಾದರೂ ಬೇಕು.

ಗಂಭೀರ ಸ್ವರೂಪದ ಗಾಯಗಳಲ್ಲಿ ಸೋಂಕು ತಗುಲಬಹುದು, ಬ್ಯಾಕ್ಟೀರಿಯಾಗಳಿಂದ ಬಾಧೆ ಉಂಟಾಗಬಹುದು, ಮೂಳೆ ಮುರಿತದಿಂದ ಉಂಟಾಗುವ ಗಾಯ, ಅಸೌಖ್ಯದ ಕಾರಣ ತಿಂಗಳಾನುಗಟ್ಟಲೆ ಹಾಸಿಗೆಯಲ್ಲಿ ಮಲಗಿದಾಗ ಉಂಟಾಗುವ ಆಳವಾದ ಬೆನ್ನಿನ ಗಾಯ, ಸುಟ್ಟ ಗಾಯಗಳಿಗೆ ಬ್ಯಾಕ್ಟೀರಿಯಾ ಸೋಂಕುಗಳಿಂದ ಗಾಯ ಉಲ್ಬಣಾವಸ್ಥೆ ತಲುಪಿ ಗಂಭೀರ ಗಾಯಗಳಾಗಿ ಪರಿಣಮಿಸುತ್ತದೆ.

ಇದೀಗ ಡಯಾಬಿಟಿಸ್ ರೋಗಿಗಳ ಗಾಯ ಬೇಗನೆ ಗುಣವಾಗಿಸಲೆಂದೇ ಅಮೆರಿಕ ವೈದ್ಯಕೀಯ ತಂತ್ರಜ್ಞಾನದ ಹೈಪರ್‌ಬೇರಿಕ್ ಆಕ್ಸಿಜನ್ ಥೆರಪಿ (ಎಚ್‌ಬಿಒಟಿ) ಬೆಂಗಳೂರಿನಲ್ಲಿ ಲಭ್ಯ.

ಹೈಪರ್‌ಬೇರಿಕ್ ಆಕ್ಸಿಜನ್ ಥೆರಪಿ (ಎಚ್‌ಬಿಒಟಿ)

'ಸಾಮಾನ್ಯವಾಗಿ ಮಧುಮೇಹ ಇದ್ದವರಿಗೆ ಸ್ಪರ್ಶ ಜ್ಞಾನ ಕಡಿಮೆ ಇರುತ್ತದೆ. ಬರಿಯ ಕಾಲಿನಲ್ಲಿ ನಡೆದಾಗ ಸಣ್ಣಪುಟ್ಟ ಗಾಯಗಳಾದರೂ ಗೊತ್ತಾಗುವುದಿಲ್ಲ. ಉರಿಬಿಸಿಲಿನಲ್ಲಿ ಕಾದ ನೆಲದ ಮೇಲೆ ನಡೆದರೂ ಬಿಸಿಯ ಅನುಭವವಾಗುವುದಿಲ್ಲ. ಕಾಲುಗಳಲ್ಲಿ, ಪಾದಗಳಲ್ಲಿ ರಕ್ತಸಂಚಾರ ಕಡಿಮೆ ಆಗುವುದರಿಂದ ಈ ರೀತಿ ಆಗುವುದಾದರೂ ಗಾಯ ಮಾಯದೇ ಇದ್ದಾಗ ಅದು ಗ್ಯಾಂಗ್ರಿನ್ ಇಲ್ಲವೇ ಅಲ್ಸರ್ ಆಗುವ ಅಪಾಯ ಇದೆ' ಎಂದು ಹೇಳುತ್ತಾರೆ ವೈದೇಹಿ ಆಸ್ಪತ್ರೆಯಲ್ಲಿ ಹೊಸದಾಗಿ ಮಧುಮೇಹ ಗಾಯ ನಿವಾರಣೆಗಾಗಿಯೇ ಆರಂಭಿಸಲಾದ ಡಾಲ್ವಕೋಟ್ ವೂಂಡ್ ಕೇರ್' ಕೇಂದ್ರದ ಮುಖ್ಯಸ್ಥರಾಗಿರುವ ಡಾ. ಮಹೇಶ್ ಕೊಟಪಲ್ಲಿ.



'ಎಚ್‌ಬಿಒಟಿಯಲ್ಲಿ ಆಮ್ಲಜನಕವನ್ನು ಬಳಸಿ ಇಡೀ ಚಿಕಿತ್ಸೆಯನ್ನು ನೀಡಲಾಗುತ್ತದೆ. ಈ ವಿಶಿಷ್ಟ ಥೆರಪಿ ದಕ್ಷಿಣ ಅಮೆರಿಕದಲ್ಲಿ ಸಾಕಷ್ಟು ಜನಪ್ರಿಯವಾಗಿದೆ. ಈ ಥೆರಪಿಯಲ್ಲಿ ಶೇ.100ರಷ್ಟು ಆಮ್ಲಜನಕವನ್ನೇ ಬಳಸಲಾಗುತ್ತದೆ. ಅನೀಮಿಯ (ರಕ್ತಹೀನತೆ) ಇರುವವರಿಗೆ, ಅಪಘಾತದಂತಹ ತುರ್ತು ಸಂದರ್ಭಗಳಲ್ಲಿ ವಿಪರೀತವಾಗಿ ರಕ್ತ ಸೋರಿಕೆ ಉಂಟಾಗಿ ಚಿಕಿತ್ಸೆ ಪಡೆಯಲು ಬಂದವರಿಗೆ ಈ ಎಚ್‌ಬಿಒಟಿ ಚಿಕಿತ್ಸೆ ಅನಿವಾರ್ಯವಾಗುತ್ತದೆ' ಎಂದು ಹೇಳುತ್ತಾರೆ ಡಾ. ಮಹೇಶ್.

'ಹೈಪರ್‌ಬೇರಿಕ್ ಆಕ್ಸಿಜನ್ ಥೆರಪಿಯಲ್ಲಿ ಒಂದು ಸಾಧನದ ಒಳಗೆ ಉಸಿರಾಟಕ್ಕೆ ಶುದ್ಧ ಆಮ್ಲಜನಕವನ್ನು ಪೂರೈಸುವ ಸೌಲಭ್ಯ ಇದೆ. ದೀರ್ಘಕಾಲದ ಗಾಯ ಗುಣಪಡಿಸಲು ಇದು ಸಹಕಾರಿ. ಕೆಲವು ಸಂದರ್ಭಗಳಲ್ಲಿ ರೋಗಿಗೆ ಹೆಚ್ಚಿನ ಪ್ರಮಾಣದ ಆಕ್ಸಿಜನ್ ಕೊಡಬೇಕಾಗುತ್ತದೆ. ಮಕ್ಕಳಾದಿಯಾಗಿ ಇಂಥ ರೋಗಿಗಳು ಲವಲವಿಕೆಯಿಂದಲೇ ಇದ್ದರೂ ಆಕ್ಸಿಜನ್ ಹೈಡೋಸೇಜ್ ಮೂಲಕವೇ ಚಿಕಿತ್ಸೆ ನೀಡಬೇಕಾಗುತ್ತದೆ' ಎನ್ನುತ್ತಾರೆ ಡಾ. ಮಹೇಶ್.

ಮೊದಲು ಈ ಚಿಕಿತ್ಸೆ ಬಗ್ಗೆ ಜನರಲ್ಲಿ ಅರಿವು ಇರಲಿಲ್ಲ. ಆದರೆ ಈಗೀಗ ಬೆಂಗಳೂರು ಮಾತ್ರವಲ್ಲದೆ ಶಿರಾ, ಮಂಡ್ಯ ಮುಂತಾದ ಕಡೆಗಳಿಂದಲೂ ರೋಗಿಗಳು ಬರತೊಡಗಿದ್ದಾರೆ. ಮಧುಮೇಹದಿಂದ ಉಂಟಾಗುವ ಎಲ್ಲ ಸಮಸ್ಯೆಗಳಿಗೆ ಒಂದೇ ಕೇಂದ್ರದಲ್ಲಿ ಚಿಕಿತ್ಸೆ ಲಭ್ಯ.